ಮೊದಲ ಅವಕಾಶದ ಸೇತುವಾಯಿತು' ಎಂದು ಖುಷಿಯಿಂದ ನೆನಪಿಸಿಕೊಳ್ಳುತ್ತಾರೆ ಶರ್ಲಿನ್.

ಶರ್ಲಿನ್, ಆಡಿಷನ್ ನೀಡಲು ತೀರ್ಮಾನಿಸಿದರು. ತಮ್ಮದೇ ಸ್ಕ್ರಿಪ್ಟ್ ಸಿದ್ಧ ಮಾಡಿಕೊಂಡು ಎರಡು ನಿಮಿಷ ವಿಡಿಯೊ ಮಾಡಿ ನಿರ್ದೇಶಕರಿಗೆ ಕಳಿಸಿದ್ದರು. ವಾಪಸ್, ಪೃಥ್ವಿ ಅವರು ಒಂದು ಸ್ಕ್ರಿಪ್ಟ್ ಕಳಿಸಿ, ಅದಕ್ಕೆ ತಕ್ಕಂತೆ ನಟಿಸಿ ವಿಡಿಯೊ ಮಾಡಿ ಕಳಿಸಲು ತಿಳಿಸಿದರು. ಆ ಆಡಿಷನ್ ಮೂಲಕ ಆಯ್ಕೆಯಾದ ಶರ್ಲಿನ್ ಸಿನಿಮಾದ ಮೊದಲ ಮೆಟ್ಟಿಲು ತುಳಿಯಲು ಅಣಿಯಾದರು.

25 ದಿನಗಳ ಕಾಲ ನಡೆದ ಚಿತ್ರೀಕರಣದಲ್ಲಿ ನಟನೆ ಜೊತೆಗೆ ಸಿನಿಮಾ ಕುರಿತ ಮೂಲ ವಿಷಯಗಳನ್ನು ಶರ್ಲಿನ್ ಅರಿತುಕೊಂಡಿದ್ದಾರಂತೆ. 'ಇದು ಕಲಿಕೆಯ ಮೊದಲ ಹೆಜ್ಜೆಯಷ್ಟೇ' ಎನ್ನುವ ಅವರಿಗೆ, ಧೈರ್ಯ–ಆತ್ಮವಿಶ್ವಾಸ ತಮ್ಮನ್ನು ಗೆಲ್ಲಿಸುತ್ತದೆ ಎನ್ನುವ ಭರವಸೆ.

'ಬುಸಾನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನಮ್ಮ 'ಹದಿನೇಳೆಂಟು' ಸಿನಿಮಾ ತೆರೆಕಂಡಿತು. ನಾನು ಅಲ್ಲಿಗೆ ಹೋಗಿರಲಿಲ್ಲ. ಗೋವಾದ ಪಣಜಿಯಲ್ಲಿ ನಡೆದ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾರತೀಯ ಪನೋರಮಾ ವಿಭಾಗದಲ್ಲಿ ಉದ್ಘಾಟನಾ ಸಿನಿಮಾ ಆಗಿ ತೆರೆಕಂಡಿತು. ಕಲಾವಿದೆ ಎಂದು ಮೊದಲು ಕರೆಸಿಕೊಂಡೆ. ಹಾಗೆ ಕರೆಸಿಕೊಳ್ಳುವುದು ಎಷ್ಟು ಸಂತಸ ನೀಡುತ್ತದೆ ಎಂಬುದು ತಿಳಿದದ್ದು ಅಲ್ಲೇ' ಎಂದು ಆನಂದದಿಂದ ನುಡಿಯುತ್ತಾರೆ ಅವರು.

'ನಮ್ಮ ಮನೆಯಲ್ಲಿ ಯಾರೂ ನಟನೆಯ ಹಿನ್ನೆಲೆಯುಳ್ಳವರಿಲ್ಲ. ಅದ್ಹೇಗೋ ನನಗೆ ನಟನೆಗೆ ಬರುವ ಮನಸ್ಸಾಯಿತು. ಯಾವುದೇ ತರಬೇತಿ ಪಡೆದವಳಲ್ಲ ನಾನು. ಆಡಿಷನ್ ಕೊಟ್ಟಿದ್ದೇ ನನ್ನ ಮೊದಲ ನಟನಾಭ್ಯಾಸ. ಆದರೆ ಸಿನಿಮಾದಲ್ಲಿ ಹೆಸರು ಮಾಡಬೇಕೆಂಬ ಆಸೆ ನನ್ನನ್ನು ಇಲ್ಲಿಯವರೆಗೂ ನಡೆಸಿದೆ' ಎಂದು ನೆನಪಿಸಿಕೊಳ್ಳುತ್ತಾರೆ.

'ನಟನೆಗೆ ತರಬೇತಿಗಿಂತ ಆತ್ಮವಿಶ್ವಾಸ ಹೆಚ್ಚು ಕೆಲಸ ಮಾಡುತ್ತದೆ. ಒಂದು ಪಾತ್ರ ಅರ್ಥವಾಗಿಬಿಟ್ಟರೆ ನಟನೆ ಸಲೀಸಾಗುತ್ತದೆ' ಎನ್ನುವ ಶರ್ಲಿನ್, ಪೃಥ್ವಿ ಅವರು ತಮ್ಮ ನಟನೆಗೆ ಉತ್ತಮ ಅಡಿಪಾಯ ಹಾಕಿಕೊಟ್ಟ ನಿರ್ದೇಶಕ ಎಂದು ಹೇಳುತ್ತಾರೆ. 'ಏನೂ ಯೋಚಿಸಬೇಡ, ನಿನಗೆ ಹೇಗೆ ಕಂಫರ್ಟ್ ಅನಿಸುತ್ತೋ, ಯಾವ ಭಾಷೆ ಸೂಕ್ತ ಅನಿಸುತ್ತೋ ಅದನ್ನೇ ಮಾಡು. ಸ್ವಾಭಾವಿಕವಾಗಿರಲಿ. ನೀನು ಆ ಸ್ಥಾನದಲ್ಲಿದ್ದರೆ ಹೇಗೆ ಇರುತ್ತಿದ್ದೆ ಎಂಬುದನ್ನು ಮನಸಲ್ಲಿಟ್ಟುಕೊಂಡು ಅಭಿನಯಿಸು' ಎಂದು ಹೇಳಿದ್ದು ನನ್ನ ಅರ್ಧ ಹೊರೆಯನ್ನು ಇಳಿಸಿತು. ಸಿನಿಮಾದಲ್ಲೂ ನನ್ನ ಧಾರವಾಡ ಕನ್ನಡವನ್ನೇ ಮಾತನಾಡಿದೆ. ನಟನೆ ಸಹಜವಾಗಿ ಬರುವಂತೆ ನೋಡಿಕೊಂಡೆ' ಎಂದು ಹೇಳುತ್ತಾರೆ.

ಹದಿಹರೆಯಕ್ಕೆ ಕಾಲಿಟ್ಟ ಇಬ್ಬರು ವಿದ್ಯಾರ್ಥಿಗಳು ತಮ್ಮ ಖಾಸಗಿ ಸಮಯವನ್ನು ವಿಡಿಯೊ ಮಾಡಿಕೊಂಡಿರುತ್ತಾರೆ. ಇದು ಇಂಟರ್ನೆಟ್‌ನಲ್ಲಿ ಹರಿದಾಡುತ್ತಾ ದೊಡ್ಡ ಸಮಸ್ಯೆಯನ್ನೇ ಹುಟ್ಟುಹಾಕುತ್ತದೆ. ಪರಿಸ್ಥಿತಿ ಅಸಹನೀಯಗೊಳ್ಳುತ್ತಾ ಸಾಗುತ್ತದೆ. ಸಾಮಾಜಿಕ ಮಾಧ್ಯಮಗಳ ಈ ಯುಗದಲ್ಲಿ, ಅದರಿಂದಾಗುವ ಪ್ರಮಾದಗಳು, ಈ ಕುರಿತು ಟೀನೇಜ್ ಮಕ್ಕಳ ನಡೆಗಳು, ಅವರಿಗೆ ಸಿಗಬೇಕಾದ ಸಲಹೆ, ಸಮಾಲೋಚನೆಗಳು, ಸಮಾಜದ ಹೊಣೆಗಾರಿಕೆಯ ಪರಿಯನ್ನೇ 'ಹದಿನೇಳೆಂಟು' ಸಿನಿಮಾ ಮೂಲಕ ಸೂಕ್ಷ್ಮವಾಗಿ ತೆರೆದಿಟ್ಟಿದ್ದಾರೆ ಪೃಥ್ವಿ ಕೊಣನೂರು.

ಈ ಸೂಕ್ಷ್ಮ ಹಾಗೂ ಭಿನ್ನ ಕಥೆಯೇ ಶರ್ಲಿನ್ ಅವರನ್ನು ಸೆಳೆದಿದೆ. 'ಸಮಾಜದಲ್ಲೇ ನಡೆಯುತ್ತಿರುವ ಸಂಗತಿಗೆ ಸಮಾಜವೇ ಸ್ಪಂದಿಸಬೇಕಾದ ರೀತಿಯನ್ನು ಈ ಕಥೆ ಸೂಕ್ಷ್ಮವಾಗಿ ದಾಟಿಸಿದೆ. ಇದರ ತೀರ್ಮಾನವನ್ನೂ ಪ್ರೇಕ್ಷಕರಿಗೇ ಬಿಡಲಾಗಿದೆ' ಎನ್ನುವ ಅವರು, 'ಈ ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ ವಿದ್ಯಾರ್ಥಿಗಳು ಜಾಗರೂಕವಾಗಿರಬೇಕು. ತಪ್ಪುಗಳಿಗೆ ಬಲಿಯಾಗಬಾರದು. ಕಾನೂನಿನ ಅರಿವಿರಬೇಕು. ಶಿಕ್ಷಣ ನಮ್ಮನ್ನು ತಿದ್ದಬೇಕು. ಹುಡುಗಿಯರು ಮತ್ತಷ್ಟು ಎಚ್ಚರದಿಂದಿರಬೇಕಿದೆ' ಎಂದು ಕಿವಿಮಾತು ಹೇಳುತ್ತಾರೆ.

ಜನರೊಂದಿಗೆ, ಸಮಾಜದೊಂದಿಗೆ ಸ್ಪಂದಿಸುವಂಥ ಸಿನಿಮಾಗಳಲ್ಲಿ ನಟಿಸಲು ಇಷ್ಟ ಎನ್ನುವ ಶರ್ಲಿನ್, 'ಫ್ಲೇನ್ ಸ್ಕ್ರಿಪ್ಟ್'ಗಳನ್ನು ಮಾಡುವುದಿಲ್ಲ ಎನ್ನುತ್ತಾರೆ. ಕಷ್ಟಕ್ಕೆ ಇದಿರಾಗಿ ನಿಲ್ಲುವಂಥ ಬೋಲ್ಡ್ ಮಹಿಳೆಯ ಪಾತ್ರವನ್ನು ತಮ್ಮ ಇಷ್ಟದ ಪಟ್ಟಿಯಲ್ಲಿರಿಸಿಕೊಂಡಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in





# ಸಿಂಹಪ್ರಿಯಾಗೆ ಉಡುಗೊರೆ

ಜ.26ರಂದು ಸಪ್ತಪದಿ ತುಳಿದ ಚಂದನವನದ ಜೋಡಿ ವಸಿಷ್ಠ, ಹರಿಪ್ರಿಯಾಗೆ ಮದುವೆ ಉಡುಗೊರೆಯಾಗಿ 'ಯದಾ ಯದಾ ಹಿ' ಚಿತ್ರತಂಡ ವಿಶೇಷ ಉಡುಗೊರೆಯೊಂದನ್ನು ನೀಡಿದೆ. ಈ ಚಿತ್ರದ ಮೋಷನ್ ಪೋಸ್ಟರ್ ಅನ್ನು ಬಿಡುಗಡೆ ಮಾಡಿದೆ.

'ಯದಾ ಯದಾ ಹಿ' ಚಿತ್ರ, ತೆಲುಗಿನ 'ಎವುರು' ಚಿತ್ರದ ರೀಮೇಕ್ ಆಗಿದ್ದು, ವಸಿಷ್ಠಸಿಂಹ, ಹರಿಪ್ರಿಯಾ ಹಾಗೂ ದಿಗಂತ್ ಮಂಚಾಲೆ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಕ್ರೈಂ ಕಥಾಹಂದರದ ಈ ಚಿತ್ರ ಬಿಡುಗಡೆಗೆ ಸಿದ್ಧತೆ ನಡೆಸುತ್ತಿದೆ.

ತೆಲುಗಿನಲ್ಲಿ ಎರಡು ಚಿತ್ರ ನಿರ್ದೇಶಿಸಿರುವ ಅಶೋಕ್ ತೇಜ ಯದಾ ಯದಾ ಹಿ ಚಿತ್ರದ ಮೂಲಕ ಮೂಲಕ ನಿರ್ದೇಶಕರಾಗಿ ಕನ್ನಡಕ್ಕೆ ಪದಾರ್ಪಣೆ ಮಾಡಿದ್ದಾರೆ. ತೆಲುಗಿನಲ್ಲಿ ನಟ ರೆಜಿನಾ ನಿರ್ವಹಿಸಿದ್ದ ಪಾತ್ರವನ್ನು ಹರಿಪ್ರಿಯಾ ಹಾಗೂ ಅದ್ವಿಶೇಷ್ ಪಾತ್ರದಲ್ಲಿ ದಿಗಂತ್ ಕಾಣಿಸಿಕೊಳ್ಳಲಿದ್ದಾರೆ.

ಈ ಚಿತ್ರಕ್ಕೆ ರೈಸ್ ಅಂಡ್ ಡಾಲ್ಸ್ ಕ್ರಿಯೇಶನ್ಸ್ ಮೂಲಕ ಹೈದರಾಬಾದ್‌ನ ರಾಜೇಶ್ ಅಗರವಾಲ್ ಬಂಡವಾಳ ಹೂಡಿದ್ದಾರೆ. ಇಂಗ್ಲಿಷ್ ಭಾಷೆಯಲ್ಲಿ 'ದಿ ಇನ್ವಿಸಿಬಲ್ ಗೆಸ್ಟ್' ಹೆಸರಿನಲ್ಲಿ ತಯಾರಾಗಿದ್ದ ಈ ಚಿತ್ರ ಹಿಂದಿ ಭಾಷೆಯಲ್ಲೂ ನಿರ್ಮಾಣವಾಗಿತ್ತು. ಕೊಲೆಗಾರನನ್ನು ಪತ್ತೆ ಮಾಡುವುದೇ ಚಿತ್ರದ ಆಸಕ್ತಿಕರ ವಿಷಯ. ಚರಣ್ ಪಕಡ ಅವರ ಸಂಗೀತ ನಿರ್ದೇಶನ, ಯೋಗಿ ಅವರ ಕ್ಯಾಮೆರಾ ಹಾಗೂ ಶ್ರೀಕಾಂತ್ ಅವರ ಸಂಕಲನ ಈ ಚಿತ್ರಕ್ಕಿದೆ.